ಶ್ರೀ ಜಿ. ಬಿ. ಶಂಕರ್‌ರಾವ್.—ಹೊಸ ಸೆಕ್ಷನ್ ತೆರೆಯಬೇಕಾದರೆ ಅದಕ್ಕೆ ಆಕಾಮಡೇಷನ್ ಬೇಕಾಗುತ್ತದೆ. ಇನ್ನೂ ಬೇರೆ ಬೇರೆಯಾದ ವ್ಯವಸ್ಥೆ ಮಾಡಬೇಕಾಗುತ್ತದೆ. ಹಾಗೆ ಮಾಡದೆ ಹೋದರೆ ಷಿಫ್ಟ್ ಅರೇಂಜ್‌ಮೆಂಟ್ಸ್ ಮಾಡಬೇಕಾಗುತ್ತದೆ. ಇವೆಲ್ಲವನ್ನೂ ಆಲೋಚನೆ ಮಾಡಿ ಮಾಡಬೇಕಾಗುತ್ತದೆ.

ಶ್ರೀ ವೈ ಕೇಲ್ ಫರ್ನಾಂಡಿಸ್.—ನಾನು ಕೋಡಹಳ್ಳಿ ಶಿವರಾಂ ಚಲನ ಚಿತ್ರ ನಿರ್ಮಾಪಕರು ತೆಗೆದಿರುವ ಒಂದು ಕಾಲಿಂಗ್ ಅಟೆನ್‌ಷನ್ ನೋಟೀಸ್ ಕಳುಹಿಸಿದ್ದೇನೆ. ಇನ್ನೂ ಬಂದಿಲ್ಲಾ.

MR. SPEAKER.—I will take it up.

PAPERS TO BE LAID ON THE TABLE

SRI R. GUNDU RAO (Chief Minister).—Sir, I beg to lay the following Notifications standing again t my name.

1. Order No. HD 113 CNA 78, dated 9th July, 1980.
   Grant of exemption under Section 20 of the Karnataka Cinemas (Regulation) Act, 1964 for exhibition of 35 Mm. films by the Assistant Director of Central Institute of Indian Languages, Mysore.
2. Order No. HD 104 CNA 80 dated 11th July, 1980.
   Grant of exemption under Section 20 of the Karnataka Cinemas (Regulation) Act, 1964 for exhibition of 35 Mm. feature films by the DAR Welfare Centre, Mysore.
3. Order No. HD 239 CNA 78, dated 16th July, 1980.
   Grant of Exemption under Section 20 of the Karnataka Cinemas (Regulation) Act, 1964 for exhibition of 16 Mm. films by means of Photophone sound projectors by the National Mineral Development Corporation Limited, Donimali town ship, Bellary District.

Under section 20 of the Karnataka Cinema (Regulation) Act, 1964.

SPEAKER.—Papers are laid.

CALLING ATTENTION TO MATTERS OF URGENT PUBLIC IMPORTANCE :

re :—Non-release of Kannada film 'Grahana' in the State.

SRI D. T. RAMU.—I call the attention of the Chief Minister to the Non-release of Kannada Film 'Grahana' in the State which has won National, International Awards and has been screened in other States.

SRI R. GUNDU RAO (Chief Minister).—Sir. I beg to make the following statement.

ಗೃಹಣ ಚಿತ್ರವನ್ನು ಬೆಂಗಳೂರು ನಗರದಲ್ಲಿ ಪ್ರದರ್ಶಿಸಲು ಮೂವಿಲ್ಯಾಂಡ್ ಚಿತ್ರಮಂದಿರವನ್ನು ನಸಡುತ್ತಿರುವ ಶ್ರೀ ವೆಂಕಟೇಶ್ವರ ಎಂಟರ್‌ಪ್ರೈಸಸ್‌ನವರು ಒಪ್ಪಿದರು. ಈ ವಿಷಯವನ್ನು ನಿರ್ಮಾಪಕರಿಗೆ ತಿಳಿಸಿ ಪ್ರದರ್ಶನಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳಲು ಕೋರಲಾಯಿತು. ಆದರೆ ಇವರು ಈ ಚಿತ್ರವನ್ನು ಮೂವಿಲ್ಯಾಂಡ್ ಚಿತ್ರಮಂದಿರದಲ್ಲಿ ಪ್ರದರ್ಶಿಸಲು ಸಾಧ್ಯವಿಲ್ಲವೆಂದು ಚಲನಚಿತ್ರ ವಾಣಿಜ್ಯ ಮಂಡಳಿಯವರಿಗೆ ತಿಳಿಸಿ. ಮೇ ೧೯೬೯ರಲ್ಲಿ ಒಂದು ಖಚಿತ ತಾರೀಖು ಮತ್ತು ಖಚಿತ ಚಲನ ಚಿತ್ರಮಂದಿರದಲ್ಲಿ ಪ್ರದರ್ಶಿಸಬೇಕೆಂದು ಕೇಳಿಕೊಂಡರು.

ಚಿತ್ರದ ನಿರ್ಮಾಪಕರಾದ ಶ್ರೀ ಹರ್ಷ ಚಿತ್ರ ತಯಾರಕರು ತಮ್ಮ ಚಿತ್ರ ಅಂತರರಾಷ್ಟ್ರೀಯ ಮತ್ತು ರಾಷ್ಟ್ರೀಯ ಬಹುಮಾನ ಪಡೆದ ಚಿತ್ರವಾಗಿರುವುದರಿಂದ ಇವರು ತಾರೀಖು ೪-೧೦-೧೯೬೯ ರಲ್ಲಿ ಸರ್ಕಾರಕ್ಕೆ ಅರ್ಜಿ ಸಲ್ಲಿಸಿ ಈ ಚಿತ್ರವನ್ನು ಅಲಂಕಾರ್, ಸವಿತ, ಸಂಪಿಗೆ, ನವರಂಗ್ ಮುಂತಾದ ಸಿನಿಮಾ ಮಂದಿರಗಳಲ್ಲಿ ಪ್ರದರ್ಶಿಸಲು ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಂಡರು. ಇದರ ಮೇರೆಗೆ ಸರ್ಕಾರವು ಕರ್ನಾಟಕ ವಾಣಿಜ್ಯ ಮಂಡಳಿಯವರಿಗೆ ತಿಳಿಸಲಾಗಿ ಚಲನಚಿತ್ರ ವಾಣಿಜ್ಯ ಮಂಡಳಿಯವರು ಯಾವುದಾದರೂ ಒಂದು ಚಿತ್ರಮಂದಿರವನ್ನು ಸೂಚಿಸಲು ಮತ್ತು ಈ ಚಿತ್ರದ ಪಬ್ಲಿಸಿಟಿ, ಪೋಸ್ಟರ್ ಮತ್ತು ಇತರ ಸಲಕರಣೆ ಸಿದ್ಧವಿದ್ದರೆ ಚಿತ್ರ ಮಂದಿರವನ್ನು ಕೊಡಿಸಲು ಸಿದ್ಧವಿರುವುದಾಗಿ ತಿಳಿಸಿದರು. ಈ ವಿಷಯವನ್ನು ಸರ್ಕಾರದ ೧೬-೧೧-೧೯೬೦ರ ಪತ್ರದ ಮೂಲಕ ನಿರ್ಮಾಪಕರಿಗೆ ತಿಳಿಸಿ ಮಂಡಳಿಯನ್ನು ಸಂಪರ್ಕಿಸಬೇಕೆಂದು ತಿಳಿಸಲಾಯಿತು. ಇದಕ್ಕೆ ಪ್ರತಿ ಉತ್ತರವಿಲ್ಲದೆ ನಿರ್ಮಾಕರು ಪದೇ ಪದೇ ಸರ್ಕಾರಕ್ಕೆ ಮನವಿಗಳನ್ನು ಸಲ್ಲಿಸುತ್ತಿದ್ದಾರೆ. ಈ ಚಿತ್ರವು ನೆರೆ ರಾಜ್ಯಗಳಲ್ಲಿ ಕಮರ್ಷಿಯಲ್ ಸರ್ಕ್ಯೂಟ್ ಮುಖಾಂತರ ಪ್ರದರ್ಶನವಾದಂತೆ ತೋರುತ್ತಿಲ್ಲ. ಇದು ಚಲನಚಿತ್ರ ಸೊಸೈಟಿಗಳ ಮುಖಾಂತರ ಅದರ ಸದಸ್ಯರ ಉಪಯೋಗಕ್ಕೆ ಪ್ರದರ್ಶನವಾಗಿದೆಯೆಂದು ತಿಳಿದುಬಂದಿದೆ. ಬೆಂಗಳೂರಿನಲ್ಲೂ ಇದೇ ರೀತಿಯಲ್ಲಿ ಮೇಲೆ ಹೇಳಿದಂತೆ ಪ್ರದರ್ಶನಗಳು ನಡೆದಿವೆ.

ಸರ್ಕಾರವು ಸಾಧಾರಣವಾಗಿ ಚಲನಚಿತ್ರ ಪ್ರದರ್ಶನಕ್ಕೆ ಅನುಕೂಲಮಾಡಿಕೊಡುವುದು ರೂಢಿಯಾಗಿಲ್ಲ. ಸರ್ಕಾರವು ಇವರ ಮನವಿಗೆ ಓಗೊಟ್ಟು ಚಲನಚಿತ್ರ ವಾಣಿಜ್ಯ ಮಂಡಳಿಯ ಅಧ್ಯಕ್ಷರಿಗೆ ತಿಳಿಸಲಾಗಿ ಅವರು ತಿಳಿಸಿದ ರೀತಿ ಪ್ರದರ್ಶನಕ್ಕೆ ಇವರು ಒಪ್ಪಲಿಲ್ಲವೆಂದು ತಿಳಿದು ಬಂದಿದೆ ಇವರು ಮೆಜೆಸ್ಟಿಕ್ ಸರಹದ್ದಿನಲ್ಲಿ ಪ್ರದರ್ಶನಕ್ಕೆ ಹೊರತು ಬೇರೆ ಕಡೆಗೆ ಒಪ್ಪಲಿಲ್ಲ. ಇದಕ್ಕೆ ಸರ್ಕಾರವು ಪೊಣೆಯಾಗದು. ಮತ್ತು ಚಿತ್ರ ನಿರ್ಮಾಪಕರು ಈ ಚಿತ್ರ ಪ್ರದರ್ಶನಕ್ಕೆ ಸಹಾಯ ಧನವಾಗಿ ಸರ್ಕಾರದ ವತಿಯಿಂದ ಒಂದು ಲಕ್ಷ ರೂಪಾಯಿಯನ್ನು ಕೊಡಬೇಕಾಗಿ ಕೋರಿದ್ದಾರೆ. ಆದರೆ ಈ ರೀತಿ ಸಹಾಯಧನವನ್ನು ಚಿತ್ರ ಪ್ರದರ್ಶನಕ್ಕೆ ಸರ್ಕಾರದ ವತಿಯಿಂದ ಕೊಡುವುದು ರೂಢಿಯಲ್ಲಿಲ್ಲ. ಈಗಲೂ ಸಹ ನಿರ್ಮಾಪಕರು ಚಲನಚಿತ್ರ ವಾಣಿಜ್ಯ ಮಂಡಳಿಯವರನ್ನು ಸಂಧಿಸಿದಲ್ಲಿ ಇವರ ಚಿತ್ರ ಬಿಡುಗಡೆಯಾಗಲು ಸಹಾಯ ದೊರಕುವ ಸಾಧ್ಯತೆ ಇದೆ.

ಈ ಚಿತ್ರದ ನಿರ್ಮಾಪಕರು ಇನ್ನೂ ಅರ್ಜಿ ಸಲ್ಲಿಸಿಲ್ಲವಾದುದರಿಂದ ಅವರಿಗೆ ಸರ್ಕಾರದಿಂದ ಇನ್ನೂ ಸಹಾಯಧನ ಮಂಜೂರಾಗಿರುವುದಿಲ್ಲ.

ಶ್ರೀ ಡಿ.ಟಿ. ರಾಮು.—ಅಧ್ಯಕ್ಷರೆ, ಈ ಒಂದು ಗೃಹಣ ಚಿತ್ರಕ್ಕೆ ೧೯೬೮ರಲ್ಲಿ ರಾಷ್ಟ್ರೀಯ ಬಹುಮಾನ ದೊರೆತಿದೆ. ಇದು ಹರಿಜನ ಶೋಷಣೆ ವಿರುದ್ಧ ಹೋರಾಟ ನಡೆಸಕ್ಕಂಥಾ ಒಂದು ಚಿತ್ರ. ಈ ಒಂದು ಚಿತ್ರಕ್ಕೆ ಬರೀ ರಾಷ್ಟ್ರೀಯ ಬಹುಮಾನ ಒಂದೇ ಅಲ್ಲ. ಅಂತರರಾಷ್ಟ್ರೀಯ ಬಹುಮಾನವೂ ಕೂಡ ದೊರೆತಿದೆ. ಆಫ್ರೋ ಏಷಿಯನ್ ಈವೊತ್ತಿನ ದಿವಸ ಇಡೀ ವಿಶ್ವದಲ್ಲೇ ಪ್ರಖ್ಯಾತಿಯಾಗಿರತಕ್ಕಂಥಾ ಚಿತ್ರ. ಲಂಡನ್ ಟೈಂಸ್ ಪತ್ರಿಕೆಯಲ್ಲಿಯೂ ಈ ವಿಚಾರ ಬಂದಿದೆ. ಆ ಒಂದು ಪತ್ರಿಕೆಗೆ ೯೦೦ ಪದಗಳನ್ನು ಮೀಸಲಾಗಿಟ್ಟಿದ್ದರಲ್ಲಿ ಈ ಒಂದು ಚಿತ್ರಕ್ಕೆ ೧೫೦ ಪದಗಳನ್ನು ಇದಕ್ಕೆ ಮೀಸಲಾಗಿರಿಸಿದ್ದಾರೆ. ಇದರಲ್ಲೇ ಗೊತ್ತಾಗುತ್ತದೆ, ಇದು ಒಂದು ಭಾವೈಕ್ಯತೆ ಚಿತ್ರ ಎನ್ನುವುದು ಇಡೀ ವಿಶ್ವದಲ್ಲೇ ಈ ಚಿತ್ರವನ್ನು ಹೊಗಳಿದ್ದಾರೆ. ನಮ್ಮ ರಾಜ್ಯದಲ್ಲಿ ನಮ್ಮ ಕನ್ನಡ ನಾಡಿನಲ್ಲಿ. ನಮ್ಮ ಕನ್ನಡ ಭಾಷೆಯಲ್ಲಿ ತೆಗೆದಿರುವ ಚಿತ್ರವನ್ನ ಪೋಲೆಂಡ್‌ನಲ್ಲಿ ಲಾಸ್‌ಎಂಜಲೀಸ್‌ನಲ್ಲಿ ಇನ್ನೂ ಅನೇಕ ಕಡೆಗಳಲ್ಲಿ ಪ್ರದರ್ಶನ ಮಾಡಿದ್ದಾರೆ. ಆದರೆ ಈವೊತ್ತು ನಮ್ಮ ಕರ್ನಾಟಕ ಫಿಲಂ ಛೇಂಬರ್ಸ್ ಕಾರ್ಪೊರೇಷನ್‌ನವರು ನಾವು ಈ ಚಿತ್ರವನ್ನು ಬೆಂಗಳೂರಿನಲ್ಲಿ ಮಿನರ್ವ ಟಾಕೀಸ್‌ನಲ್ಲಿ ಮತ್ತು ಲಕ್ಷ್ಮೀ ಟಾಕೀಸಿನಲ್ಲಿ, ಬೆಂಗಳೂರಿನಲ್ಲಿ ಬಿಡುಗಡೆ ಮಾಡುತ್ತೇವೆಂದು ಹೇಳಿದ್ದಾರೆ. ನಮ್ಮ ಸರ್ಕಾರವೂ ಕೂಡ ಈ ಬಗ್ಗೆ ಒಂದು ಕಾನೂನು

ಹಾಡಿದೆ. ಏನೆಂದರೆ ನಮ್ಮ ರಾಜ್ಯದಲ್ಲಿ ತಯಾರು ಮಾಡಿದಂಥಾ ಕನ್ನಡ ಚಲನ ಚಿತ್ರವನ್ನು ಯಾವುದೇ ಒಂದು ಥಿಯೇಟರ್ ಆಗಲಿ ಕೊನೇಪಕ್ಷ ೧೨ ವಾರಗಳ ಕಾಲವಾದರೂ ಕೂಡ ಪ್ರದರ್ಶನ ಮಾಡಬೇಕು ಎಂದು ಮಾಡಿದ್ದಾರೆ. ಈಗ ಕೆಂಪೇಗೌಡ ರಸ್ತೆಯಲ್ಲಿ, ಯಾವ ಚಿತ್ರಮಂದಿರಗಳಲ್ಲಿ ಸರ್ಕಾರದ ನಿಯಮದ ಪ್ರಕಾರ ೧೨ ವಾರಗಳ ಕಾಲ ಕನ್ನಡ ಚಿತ್ರಗಳನ್ನು ಪ್ರದರ್ಶನ ಮಾಡಿಲ್ಲವೋ ಅಂತಹ ಚಲನಚಿತ್ರ ಮಂದಿರಗಳಲ್ಲಿ ಈ ಚಿತ್ರವನ್ನು ಪ್ರದರ್ಶನ ಮಾಡುವುದಕ್ಕೆ ಅನುವು ಮಾಡಿಕೊಡಬೇಕೆಂದು ನಾನು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಈಗ ಈ ಚಿತ್ರ ಕೇರಳ, ಆಂಧ್ರ, ತಮಿಳುನಾಡು, ಬಂಗಾಳ ರಾಜ್ಯಗಳಲ್ಲಿ ಪ್ರದರ್ಶನವಾಗಿದೆ. ಆದರೆ ನಮ್ಮ ರಾಜ್ಯದಲ್ಲಿ ಚಿತ್ರೋತ್ಸವದ ಸಮಯದಲ್ಲಿ ಮಾತ್ರ ಪ್ರದರ್ಶನವಾಯಿತು. ನಂತರ ಆಗಿಲ್ಲ. ನಾನು ಬೆಂಗಳೂರು ಜಿಲ್ಲೆಯ ಪ್ರತಿನಿಧಿಯಾದರೂ ಸಹ ಮಂಡ್ಯ ಜಿಲ್ಲೆಯಲ್ಲಿ ಹುಟ್ಟಿಬೆಳೆದವನು, ಈ ಚಿತ್ರ ತೆಗೆದವರು ಸಹ ಮಂಡ್ಯ ಜಿಲ್ಲೆಯ ಒಬ್ಬ ಬಡ ಬೋರೇಗೌಡನ ಮಗ. ಆದಕಾರಣ ಅವನಿಗೆ ಅನ್ಯಾಯವಾಗದಂತೆ ಸರ್ಕಾರದವರು ನೋಡಿಕೊಳ್ಳಬೇಕು, ಇದು ಹಿಮಾಲಯದಂಥ ಚಲನಚಿತ್ರ ಮಂದಿರಗಳಲ್ಲಿ ಪ್ರದರ್ಶನವಾದರೆ ವಿದ್ಯಾವಂತರು ಹೋಗಿ ನೋಡುವುದಿಲ್ಲ. ಇತರೇ ದೊಡ್ಡ ಚಲನಚಿತ್ರ ಮಂದಿರಗಳಲ್ಲಿ ಪ್ರದರ್ಶನವಾದರೆ ವಿದ್ಯಾವಂತರೆಲ್ಲರೂ ಹೋಗಿ ನೋಡುತ್ತಾರೆ. ಆದರೆ ಬೇರೆಯವರು ಇದಕ್ಕೆ ಅವಕಾಶ ಕೊಡದೆ ಸರ್ಕಾರವನ್ನು ತಪ್ಪುದಾರಿಗೆ ಎಳೆಯುತ್ತಿದ್ದಾರೆ. ಶ್ರೀ ರೇಣುಆನಂದರಾವ್ ಈ ಚಿತ್ರವನ್ನು ಪ್ರದರ್ಶನ ಮಾಡಬೇಕೆಂದು ಕಡ್ಡಾಯ ಮಾಡಿದ್ದಾರೆ ಆ ಬಗ್ಗೆ ಬರೆದ ಪತ್ರ ನನ್ನ ಹತ್ತಿರವಿದೆ. ಆದರೂ ಸಹ ಚಲನಚಿತ್ರ ಮಂಡಲಿಯವರು ಇದಕ್ಕೆ ಇನ್ನೂ ಅವಕಾಶ ಮಾಡಿಕೊಟ್ಟಿಲ್ಲ. ಇದೊಂದು ಹೊಸ ಆಲೆಯ ಚಿತ್ರವಾಗಿದೆ. ಆದರೂ ಸಹ ರಾಜಕೀಯ ಕಾರಣಕ್ಕಾಗಿ ಇದು ಇನ್ನೂ ಬಿಡುಗಡೆಯಾಗಿಲ್ಲ. ಸರ್ಕಾರದವರು ರಾಜಕೀಯಕ್ಕೆ ಅವಕಾಶ ಕೊಡದೆ ತಕ್ಕ ಬಂದೋಬಸ್ತು ಮಾಡಿ ಕೆಂಪೇಗೌಡ ರಸ್ತೆಯಲ್ಲಿರುವ ಚಲನಚಿತ್ರ ಮಂದಿರಗಳಲ್ಲಿಯೇ ಇದು ಪ್ರದರ್ಶನವಾಗುವಂತೆ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಮೈಕೇಲ್ ಫರ್ನಾಂಡೀಸ್.—ಇದೊಂದು ಹೊಸ ಆಲೆಯ ಚಿತ್ರ. ಯಂತ್ರಕರೊಬ್ಬರು ಇದನ್ನು ತೆಗೆದಿದ್ದಾರೆ. ಇವರು ಕಾರ್ಮಿಕ ವರ್ಗಕ್ಕೆ ಸೇರಿದವರು. ಇವರ ಹತ್ತಿರ ಹೆಚ್ಚಿನ ಬಂಡವಾಳ ಸಹ ಇರಲಿಲ್ಲ. ಬಹಳ ಕಷ್ಟಪಟ್ಟು ಇದನ್ನು ತೆಗೆದಿದ್ದಾರೆ. ಆದಕಾರಣ ಸರ್ಕಾರದವರು ಬೇರೆ ಚಿತ್ರಗಳನ್ನು ನೋಡುವಂತೆ ಇದನ್ನು ನೋಡುವುದು ಸರಿಯಲ್ಲ. ಸಮಾಜದಲ್ಲಿ ಸುಧಾರಣೆಯಾಗಬೇಕೆಂದು ಬಹಳ ಆಸಕ್ತಿಯಿಂದ ಈ ಚಿತ್ರವನ್ನು ತೆಗೆದಿದ್ದಾರೆ. ಬೇರೆ ರಾಜ್ಯಗಳಲ್ಲಿ ಇಂತಹ ಚಿತ್ರವನ್ನು ಅಲ್ಲಿನ ಭಾಷೆಯಲ್ಲಿ ತೆಗೆದಿದ್ದರೆ ಹೆಚ್ಚಿನ ಪ್ರೋತ್ಸಾಹ ಕೊಡುತ್ತಿದ್ದರು. ಆದರೆ ಇಲ್ಲಿ ಕೊಟ್ಟಿಲ್ಲ. ಈಗಲಾದರೂ ಸರ್ಕಾರ ತನ್ನ ಧೋರಣೆಯನ್ನು ಬದಲಾವಣೆ ಮಾಡಿಕೊಂಡು ಒಳ್ಳೆಯ ಚಲನಚಿತ್ರ ಮಂದಿರದಲ್ಲಿ ಇದು ಬಿಡುಗಡೆಯಾಗುವಂತೆ ವ್ಯವಸ್ಥೆ ಮಾಡಬೇಕು. Atlast now the Government can use its good offices. If the Government minds it can do. ಆದರೂ ಸಹ ಏಕೆ ಮಾಡುತ್ತಿಲ್ಲ. ದೆಹಲಿಯಲ್ಲಿ ರಾಷ್ಟ್ರೀಯ ಚಲನಚಿತ್ರ ಪ್ರದರ್ಶನ ನಡೆದಾಗಲೂ ಸಹ ಈ ಚಿತ್ರದ ಬಗ್ಗೆ ಮಲತಾಯಿ ಧೋರಣೆಯನ್ನು ತೋರಿಸಿದ್ದಾರೆ. ಈಗಲಾದರೂ ಸರ್ಕಾರದವರು ಇದರ ಬಗ್ಗೆ ವಿಶೇಷ ಆಸಕ್ತಿ ವಹಿಸಿ ಈ ಚಿತ್ರ ತೆಗೆದವರಿಗೆ ಸಹಾಯ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ರಮೇಶ್‌ಕುಮಾರ್.—ಈಗ ನನ್ನ ಸ್ನೇಹಿತರು ಹೇಳಿದ್ದನ್ನೇ ಹೇಳಲು ನಾನು ಇಷ್ಟಪಡುವುದಿಲ್ಲ. ಮಾನ್ಯ ಮುಖ್ಯಮಂತ್ರಿಯವರ ಹೇಳಿಕೆಯನ್ನು ನಾನು ಎಚ್ಚರಿಕೆಯಿಂದ ಕೇಳಿದೆ. ಇದೊಂದು ಹೊಸ ಆಲೆಯ ಚಿತ್ರ ಈ ಚಿತ್ರ ತೆಗೆದವರಿಗೂ ಮತ್ತು ಫಿಲಂ ಛೇಂಬರ್ ಆಫ್ ಕಾಮರ್ಸ್‌ನವರಿಗೂ ಸ್ವಲ್ಪ ಮನಸ್ತಾಪ ಬಂದಿದೆ. ಅಲ್ಲಿ ನಡೆದ ಜನರಲ್‌ಬಾಡಿ ಮೀಟಿಂಗ್‌ನಲ್ಲಿ ಆಕೌಂಟ್ಸ್ ಬಗ್ಗೆ ಈ ನಿರ್ಮಾಪಕರು ಕೆಲವು ವಿವರಗಳನ್ನು ಕೇಳಿದ್ದಕ್ಕೆ, ಅಲ್ಲಿ ವೆಸ್ಟೆಡ್ ಇಂಟರೆಸ್ಟ್ ಏನಿದ್ದಾರೆ, ಅವರು ಇವರ ವಿರುದ್ಧ ರೊಚ್ಚಿಗೆದ್ದಿದ್ದಾರೆ. ನಗರದಲ್ಲಿರುವಂತಹ ಚಲನಚಿತ್ರ ಮಂದಿರಗಳಲ್ಲಿ ಚಿತ್ರಗಳನ್ನು ಬಿಡುಗಡೆ ಮಾಡಿಸುವಂತಹ ಅಧಿಕಾರ ಇವರ ಕೈಯಲ್ಲಿದೆ ಆದಕಾರಣ ಈ ಚಿತ್ರ ಬಿಡುಗಡೆಯಾಗದಂತೆ ತಡೆಗಟ್ಟುತ್ತಿದ್ದಾರೆ. ಕೆಲವು ಡಿಸ್ಟ್ರಿಬ್ಯೂಟರ್ಸ್ ಒಂದು ಗುಂಪಾಗಿ ತಮ್ಮ ಹಿತವನ್ನು ಸಾಧನೆ ಮಾಡಿಕೊಳ್ಳುವುದಕ್ಕೆ ಈ ರೀತಿ ಮಾಡುತ್ತಿದ್ದಾರೆ. ಇದು ರಾಷ್ಟ್ರ ಮಟ್ಟದಲ್ಲಿ ಪಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಪಡೆದು ಬಹುಮಾನವನ್ನು ಸಹ ಗಳಿಸಿದೆ. ಯಾರು ಶೋಷಣೆಗೆ ಒಳಗಾಗಿದ್ದಾರೆ, ಅಂತಹವರ ಬಗ್ಗೆ ಚಿತ್ರ ತೆಗೆಯಲಾಗಿದೆ. ಆದಕಾರಣ ಇಂತಹ ಚಿತ್ರಕ್ಕೆ ಪ್ರೋತ್ಸಾಹ ಕೊಡುವುದು ಸರ್ಕಾರದ ಕರ್ತವ್ಯವಾಗಿದೆ. ಈ ದೃಷ್ಟಿಯಿಂದ ಯಾರು ಈ ಚಿತ್ರದ ಬಿಡುಗಡೆಗೆ ಅಡ್ಡಿ ಬಂದಿದ್ದಾರೆ, ಅಂತಹವರನ್ನು ತರಾಟೆಗೆ ತೆಗೆದು

ಕೊಂಡು, ಅವರಿಗೆ ಬುದ್ಧಿಕಲಿಸಿ ಈ ಚಿತ್ರವನ್ನು ಕೆಂಪೇಗೌಡ ರಸ್ತೆಯಲ್ಲಿರುವ ಚಿತ್ರಮಂದಿರಗಳಲ್ಲಿ ಪ್ರದರ್ಶನ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜೆ.ಹೆಚ್. ಪಟೇಲ್.—ಮಾನ್ಯ ಅಧ್ಯಕ್ಷರೆ. ಇಲ್ಲಿಯವರೆಗೆ ಮಾನ್ಯ ಸದಸ್ಯರು ಈ ಚಿತ್ರದ ಪ್ರಾಮುಖ್ಯತೆ ಬಗ್ಗೆ ಹೇಳಿದ್ದಾರೆ. ಇದನ್ನು ಅರ್ಥ ಮಾಡಿಕೊಳ್ಳಲು ಮಾನ್ಯ ಮುಖ್ಯಮಂತ್ರಿಗಳು ಒಂದು ಸಲ ಇದನ್ನು ನೋಡಲಿ ಎಂದು ನಾನು ಅಪೇಕ್ಷೆ ಮಾಡುತ್ತೇನೆ. ಇದೊಂದು ಗಂಭೀರವಾದ ಚಿತ್ರ. ಬೇರೆ ಚಿತ್ರಗಳಂತೆ ಇದು ಜನಪ್ರಿಯವಾಗುತ್ತದೆಂದು ನನಗನ್ನಿಸುವುದಿಲ್ಲ. ಏಕೆಂದರೆ, ಬೇರೆ ಚಿತ್ರಗಳಲ್ಲಿ ಏನು ಒಂದು ಆಕರ್ಷಣೆಗಳು ಇರುತ್ತವೋ, ಅದೆಲ್ಲಾ ಇದರಲ್ಲಿ ಇಲ್ಲ. ಆದರೆ ವಾಸ್ತವಿಕವಾಗಿ ಇದೊಂದು ಗಂಭೀರ ಚಿತ್ರ. ಆದಕಾರಣ ಇದನ್ನು ಜನರು ಸಪೋರ್ಟ್ ಮಾಡುತ್ತಾರೆ. ನಮ್ಮಲ್ಲಿ ಸಾಮಾಜಿಕ ವ್ಯವಸ್ಥೆ, ಜಾತಿಯ ವ್ಯವಸ್ಥೆ ಹಾಗೂ ಮೂಢ ನಂಬಿಕೆಗಳು ಯಾವ ರೀತಿ ಇವೆ ಎಂಬ ಬಗ್ಗೆ ಇದರಲ್ಲಿ ಚಿತ್ರಿಸಲಾಗಿದೆ, ಆದಕಾರಣದಿಂದಲೇ ಇದನ್ನು ಅಂತರರಾಷ್ಟ್ರೀಯ ಚಲನ ಚಿತ್ರೋತ್ಸವದಲ್ಲಿ ಪ್ರದರ್ಶಿಸಲಾಗಿದೆ. ಆದಕಾರಣ ಇಲ್ಲಿಯೂ ಸಹ ಇದು ಪ್ರದರ್ಶನಗೊಳ್ಳಲು ಸರ್ಕಾರದ ಸಹಾಯ ಬೇಕಾಗುತ್ತದೆ. ಏಕೆಂದರೆ, ನಿರ್ಮಾಪಕರ ಹತ್ತಿರ ಹಣವಿಲ್ಲದಿದ್ದರೂ ಸಹ ಕಲೆಯ ದೃಷ್ಟಿಯಿಂದ ಕಷ್ಟ ಪಟ್ಟು ಇದನ್ನು ತೆಗೆದಿದ್ದಾರೆ. ಆದಕಾರಣ ಇದಕ್ಕೆ ಸರ್ಕಾರದ ಬೆಂಬಲ ಬೇಕಾಗುತ್ತದೆ. ಇದಕ್ಕೆ ನನ್ನ ಸಲಹೆ ಏನೆಂದರೆ ಈ ಚಿತ್ರದ ಪೋಸ್ಟರ್‌ಗಳನ್ನು ಸರ್ಕಾರದವರೇ ಅಚ್ಚುಹಾಕಿಸಿ, ಅದಕ್ಕೆ ಆಗುವ ಖರ್ಚನ್ನು ಈ ಚಿತ್ರದ ಪ್ರದರ್ಶನದಿಂದ ಬಂದ ಹಣದಿಂದ ಪಡೆದುಕೊಳ್ಳಬಹುದು. 'ಅರಿವು' ಚಿತ್ರಕ್ಕೆ ಈ ರೀತಿ ಮಾಡಲಾಗಿದೆ. ಆದರಂತೆ ಇದಕ್ಕೂ ಮಾಡಬೇಕೆಂದು ಹೇಳುತ್ತೇನೆ. ಮಂತ್ರಿ ಈ ಚಿತ್ರವನ್ನು ವಿಧಾನಸಭಾ ಸದಸ್ಯರಿಗೂ ತೋರಿಸಬೇಕೆಂದು ಹೇಳುತ್ತೇನೆ.

ಶ್ರೀ ಐ.ಪಿ.ಡಿ. ಸಾಲಪ್ಪ.—ಇದು ಕಮರ್ಷಿಯಲ್ ಚಿತ್ರವಲ್ಲ. ಇದು ಒಂದು ರೀತಿಯ ಕಲೆಯಿಂದ ಕೂಡಿದ ಚಿತ್ರವೆಂದು ರಾಷ್ಟ್ರದ ಮಟ್ಟದಲ್ಲಿ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಪಡೆದಿದೆ. ಇದೇರೀತಿ ರಾಷ್ಟ್ರ ಮಟ್ಟದಲ್ಲಿ ಪ್ರಶಸ್ತಿ ಪಡೆದ ಕಾಡುಕುದುರೆ ಚಿತ್ರಕ್ಕೆ ತೆರಿಗೆ ವಿನಾಯಿತಿಯನ್ನು ನಾಲ್ಕು ವಾರಗಳ ಕಾಲಕೊಟ್ಟು ಇಡೀ ರಾಜ್ಯದಲ್ಲಿ ಅದು ಪ್ರದರ್ಶನವಾಗುವಂತೆ ಸರ್ಕಾರ ವ್ಯವಸ್ಥೆ ಮಾಡಿತ್ತು. ಅದೇರೀತಿ ಇದಕ್ಕೂ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ, ಏಕೆಂದರೆ, ಈ ಗ್ರಹಣ ಚಿತ್ರವು ಬಡಜನರಿಗೆ ಸಂಬಂಧಪಟ್ಟ ಚಿತ್ರವಾಗಿದೆ. ಇದಕ್ಕೆ ಸರ್ಕಾರ ಪ್ರೋತ್ಸಾಹ ಕೊಡಬೇಕು, ತೆರಿಗೆ ವಿನಾಯಿತಿ ಕೊಡಬೇಕು ಕಾಡುಕುದುರೆ ಚಿತ್ರ ಅಲಂಕಾರ ಚಿತ್ರಮಂದಿರದಲ್ಲಿ ಬಿಡುಗಡೆಯಾದಂತೆ, ಈ ಚಿತ್ರವನ್ನು ಸಹ ಅಂತಹ ಒಳ್ಳೆಯ ಚಲನಚಿತ್ರ ಮಂದಿರಗಳಲ್ಲಿ ಬಿಡುಗಡೆ ಮಾಡಿಸಲು ವ್ಯವಸ್ಥೆ ಮಾಡಬೇಕೆಂದು ತಮ್ಮ ಮೂಲಕ ಸರ್ಕಾರದಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ವಿ.ವಿ. ಪತ್ತಾರ್.—ಮಾನ್ಯ ಅಧ್ಯಕ್ಷರೆ ಹರಿಜನರ ಉದ್ಧಾರ ಮಾಡಲು ಸರ್ಕಾರ ನಾನಾ ರೀತಿಯಿಂದ ಪ್ರಯತ್ನ ಮಾಡುತ್ತಿದೆ. ಈ ರಾಜ್ಯದಲ್ಲಿ ಹರಿಜನರ ಶೋಷಣೆ ಯಾವ ರೀತಿ ನಡೆಯುತ್ತಿದೆ ಎಂಬ ಬಗ್ಗೆ ಭೈರಪ್ಪನವರು ಒಂದು ಕಾದಂಬರಿ ಬರೆದಿದ್ದಾರೆ. ಅದರ ಒಂದು ಆಧಾರದ ಮೇಲೆ ಈ ಗ್ರಹಣ ಚಿತ್ರವನ್ನು ತೆಗೆಯಲಾಗಿದೆ. ಜಾತಿಯ ಬಗ್ಗೆ ಇದರಲ್ಲಿ ಮುಖ್ಯವಾಗಿ ಪ್ರಸ್ತಾಪ ಮಾಡಿದ್ದಾರೆ. ಆದಕಾರಣ ಈ ಚಿತ್ರಕ್ಕೆ ಎಲ್ಲ ರೀತಿಯ ಪ್ರೋತ್ಸಾಹವನ್ನು ಕೊಡಬೇಕು ಮತ್ತು ನವಾಗೆಲ್ಲಾ ಇದನ್ನು ತೋರಿಸಬೇಕೆಂದು ಕೇಳಿಕೊಳ್ಳುವುದರ ಜೊತೆಗೆ ಇದು ಪ್ರದರ್ಶನಗೊಳ್ಳಲು ಒಂದು ಒಳ್ಳೆಯ ಥಿಯೇಟರನ್ನು ಕೊಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

12-30ಪಿ.ಎಂ.

ಶ್ರೀ ಆರ್. ಗುಂಡೂರಾವ್ (ಮಾನ್ಯ ಮುಖ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೆ. ಶ್ರೀಮಾನ್ ಡಿ. ಟಿ ರಾಮು ಅವರು ಮತ್ತು ಇನ್ನೂ ಕೆಲವು ಸ್ನೇಹಿತರು ಹೇಳಿದಂತೆ ಮತ್ತು ನನ್ನ ವರದಿಯಲ್ಲಿ ಹೇಳಿದಂತೆ ಗ್ರಹಣ ಚಿತ್ರ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಖ್ಯಾತಿಗಳಿಸಿದೆ, ಪೆಸರು ಗಳಿಸಿದೆ. ಮಾನ್ಯ ರಮೇಶ್‌ಕುಮಾರ ರವರು ಫಿಲ್ಮ್ ಛೇಂಬರ್ ಆಫ್ ಕಾಮರ್ಸ್ ಬಗ್ಗೆ ಹೇಳಿದರು. ಸರ್ಕಾರ ವಾಣಿಜ್ಯ ಮಂಡಳಿಯವರಿಗೆ ಅವಕಾಶ ಮಾಡಿಕೊಡಿ ಎಂದು ತಿಳಿಸಿದೆ. ಅವರೂ ಕೂಡ ಒಪ್ಪಿದ್ದಾರೆ. ಈಗ ಏನಾಗಿದೆಯೆಂದರೆ, ದುರದೃಷ್ಟವಶಾತ್ ನಮ್ಮ ರಾಷ್ಟ್ರದಲ್ಲಿ ಬೇರೆ ಯಾವ ಭಾಷೆಯ ಚಿತ್ರಗಳಿಗೆ ಈ ರೀತಿಯ ಪರಿಸ್ಥಿತಿ ಬಂದಿಲ್ಲ. ಯಾವ ರಾಜ್ಯದಲ್ಲೂ ಕೂಡ ನಮ್ಮ ಭಾಷೆಯ ಚಿತ್ರ ಪದರ್ಶನವಾಡಿ

ಎಂದು ಕೇಳಿಕೊಳ್ಳುವುದೇ ಇಲ್ಲ. ನಮ್ಮಲ್ಲಿ ಏನಾಗಿದೆಯೆಂದರೆ, ಕನ್ನಡ ಚಿತ್ರ ಬೆಂಗಳೂರಂ ಮತ್ತೆ ಕೆಲವು ಊರುಗಳಲ್ಲಿ ಪ್ರದರ್ಶನ ಮಾಡಬೇಕಾದರೆ ನಾನಾ ಕಾರಣಗಳಿಂದ ಜನರ ಮೆಚ್ಚುಗೆ ಗಳಿಸಿಲ್ಲ. ಮಾನ್ಯ ಸದಸ್ಯರೇ ಹೇಳಿದಂತೆ ಕಮರ್ಷಿಯಲ್ ಪಾಯಿಂಟ್ ಆಫ್ ವ್ಯೂನಿಂದ ಯಾವುದೇ ಚಿತ್ರ ನಿರ್ಮಾಪಕರಾಗಲಿ ಪ್ರದರ್ಶನ ಮಾಡಿಕೊಂಡಿರುವವರಿಗಾಗಲೀ ತನಗೆ ಲಾಭ ಬರಬೇಕು ಎಂಬ ಉದ್ದೇಶದಿಂದ ಚಿತ್ರ ತೆಗೆಯುತ್ತಾರೆ; ಆದರೆ ನಷ್ಟವಾಗುತ್ತದೆ. ಏಕೆಂದರೆ, ಆಂಧ್ರ, ತಮಿಳು ನಾಡು, ಕೇರಳ, ಮಹಾರಾಷ್ಟ್ರದಲ್ಲಿ ಎಲ್ಲಾದರೂ ಸಹ ನಮ್ಮ ಭಾಷೆಯ ಚಿತ್ರಗಳು ಅಲ್ಲಿಯ ಥಿಯೇಟರುಗಳಲ್ಲಿ ಪ್ರದರ್ಶನವಾಗುವುದೇ ಇಲ್ಲ. ಹಿಂದಿ ಚಿತ್ರಗಳು ಸಾಮಾನ್ಯವಾಗಿ ಎಲ್ಲಾ ಕಡೆ ಪ್ರದರ್ಶನವಾಗುತ್ತವೆ; ಕೆಲವು ಕನ್ನಡ ಚಿತ್ರಗಳು ಪ್ರದರ್ಶನವಾಗಬಹುದು. ಆದರೆ ನಮ್ಮ ಕರ್ನಾಟಕದಲ್ಲಿ ಅನೇಕ ವರ್ಷಗಳಿಂದ ಕನ್ನಡ ಚಿತ್ರಗಳನ್ನು ಥಿಯೇಟರುಗಳಲ್ಲಿ ಪ್ರದರ್ಶನ ಮಾಡದೇ ಹೋದರೆ ಕಲ್ಲು ಹೊಡೆಯುವುದು ನಡೆದಿದೆ, ಕಲ್ಲು ಹೊಡೆಯುವುದು ಸರಿಯೆಂದು ನಾನು ಹೇಳುವುದಿಲ್ಲ. ಕನ್ನಡ ಚಿತ್ರವನ್ನು ಪ್ರದರ್ಶಿಸಬೇಕು. ಹಿಂದಿ ಭಾಷೆ ಸಾಮಾನ್ಯವಾಗಿ ಯಾರಿಗೂ ಅರ್ಥವಾಗುವುದಿಲ್ಲ, ಆದರೂ ಹಿಂದಿ ಚಿತ್ರವನ್ನು ಹಾಕುತ್ತಾರೆ. ಹಿಂದಿ ಚಿತ್ರ ೧೫–೨೦ ವಾರ ಬೆಂಗಳೂರಿನಲ್ಲಿ ಹಾಕುತ್ತಾರೆ; ನಮ್ಮವರೆ ಹಿಂದಿ ಚಿತ್ರಗಳನ್ನು ನೋಡುತ್ತಾರೆ. ಅದೇ ಪ್ರಕಾರ ತಮಿಳು ಚಿತ್ರಗಳೂ ಹೋಗುತ್ತಾ ಇವೆ. ತೆಲುಗು ಚಿತ್ರಗಳು ಆದರಲ್ಲೂ ಶಂಕರಾಭರಣಂ ಚಿತ್ರ ಬಹುಶಃ ಎಲ್ಲಾ ರೆಕಾರ್ಡ್ ಗಳನ್ನೂ ಬ್ರೇಕ್‌ಮಾಡಿ ಹೋಗುತ್ತಾ ಇದೆ. ಚಿತ್ರ ನೋಡಿ ಎಂದು ಜನರಿಗೆ ಒತ್ತಾಯ ಮಾಡುವುದಿಲ್ಲ, ಜನರಿಗೆ ಹಿಡಿಸುವಂಥ ಚಿತ್ರವಾಗಿದ್ದರೆ ಜನರು ತಾವಾಗಿಯೇ ನೋಡುತ್ತಾರೆ. ಒಂದೊಂದು ಸಾರಿ ಅದೃಷ್ಟವೂ ಬೇಕು. ಒಂದೊಂದು ಸಾರಿ ಕಡಿಮೆ ದುಡ್ಡಿನಲ್ಲಿ ತೆಗೆದ ಚಿತ್ರ ಹೆಚ್ಚು ಹಣವನ್ನು ಸಂಪಾದಿಸಿದೆ, ಜಾಸ್ತಿ ಹಣದಲ್ಲಿ ತೆಗೆದ ಚಿತ್ರ ಕಡಿಮೆ ಹಣ ಗಳಿಸಿದೆ. ಅವರವರ ಕಥೆ ಸಾರಾಂಶದ ಮೇಲೆ ಹೋಗುತ್ತದೆ. ಈ ಬಗ್ಗೆ—ವಾಣಿಜ್ಯ ಮಂಡಳಿಯವರಿಗೆ ಹೇಳಿದ್ದೇವೆ, ಅವರೂ ಒಪ್ಪಿದ್ದಾರೆ. ಅವರು ನಮ್ಮ ಥಿಯೇಟರುಗಳೆಲ್ಲ ಮೊದಲೇ ಬುಕ್ಕಾಗಿವೆ, ಬೆಳಗಿನ ಚಿತ್ರವಾಗಿ ಮತ್ತು ನೂನ್ ಷೋ ಚಿತ್ರ ಪ್ರದರ್ಶನ ನಡಸಲಿಕ್ಕೆ ತಯಾರಾಗಿದ್ದೇವೆ, ಕಂಟಿನ್ಯುಟಿ ಕೊಟ್ಟರೆ ೧೦೦೦–೧೫೦೦ ಸೀಟ್ಸ್ ಇರುವಂಥ ಥಿಯೇಟರುಗಳಿಗೆ ಕೊಟ್ಟರೆ ಅವರಿಗೂ ಲಾಭವಾಗುವುದಿಲ್ಲ, ನಮಗೂ ಲಾಭವಾಗುವುದಿಲ್ಲ, ಬಹಳ ಕಷ್ಟವಾಗುತ್ತದೆ ಎಂದು ತಿಳಿಸಿದ್ದಾರೆ. ಮಾನ್ಯ ಜೆ. ಎಚ್. ಪಟೇಲರು ಮುಖ್ಯ ಮಂತ್ರಿಗಳು ಮತ್ತು ಸದಸ್ಯರೆಲ್ಲಾ ಆ ಚಿತ್ರವನ್ನು ನೋಡಬೇಕು ಎಂದು ಹೇಳಿದರು, ಸಂತೋಷ. ಮುಖ್ಯ ಮಂತ್ರಿಯಾದ ಮೇಲೆ ಸಿನಿಮಾ ನೋಡುವುದು ಕಷ್ಟವಾಗಿಬಿಟ್ಟಿದೆ. ಇಲ್ಲದೇಹೋದರೆ ಬಹಳ ಸಿನಿಮಾ ನೋಡುತ್ತಿದ್ದೆ. ಕೆಲವು ಚಿತ್ರಗಳನ್ನು ನೋಡುವುದರಿಂದ ಬಹಳ ತಿಳುವಳಿಕೆ ಬರುತ್ತದೆ, ನಮಗೆ ಭಾಷೆ ಕಲಿಯುವುದಕ್ಕೆ ಸಿನೆಮಾ ಒಂದು ಆಧಾರ, ಡೈಲಾಗ್ ಅರ್ಥಮಾಡಿಕೊಳ್ಳುವುದಕ್ಕೆ ಅವಕಾಶವಾಗುತ್ತದೆ.

ಶ್ರೀ ಬಿ. ಬಸವಲಿಂಗಪ್ಪ.—ಕತ್ತಿ ವರಸೆ ಬಹಳ ನೋಡಿದ್ದೀರಾ ?

ಶ್ರೀ ಆರ್. ಗುಂಡೂರಾವ್.—ಕತ್ತಿ ವರಸೆ, ಗಧೆ ವರಸೆ ಎಲ್ಲಾ ಕಲಿಯದೇ ಹೋದರೆ ನೀವೆಲ್ಲಿ ಬಿಡುತ್ತೀರಿ ನಮ್ಮನ್ನು. ಈಗ ಪರಿಸ್ಥಿತಿ ಏನಾಗಿದೆಯೆಂದರೆ, ಹಣಕಾಸಿನ ದೃಷ್ಟಿಯಿಂದ ಒಪ್ಪಿಕೊಳ್ಳುತ್ತೇನೆ. ಮಾನ್ಯ ಫರ್ನಾಂಡಿಸ್ ಅವರು ಸಬ್ಸಿಡಿ ಕೊಡಬಹುದು ಎಂದು ಹೇಳಿದರು. ಮಾನ್ಯ ಜೆ. ಎಚ್. ಪಟೇಲರು ಆರಿವು ಚಿತ್ರಕ್ಕೆ ಕೊಟ್ಟಹಾಗೆ ಇದಕ್ಕೂ ಲೋನ್ ಕೊಡಿಸಿ ಎಂದು ಹೇಳಿದರು. ಪ್ರಚಾರಕ್ಕೆ, ಪಬ್ಲಿಸಿಟಿಗೆ ಕೊಡುವುದಕ್ಕೆ ಸರ್ಕಾರಕ್ಕೆ ಅವಕಾಶವಿಲ್ಲ, ಯಾವರೀತಿಯಲ್ಲೂ ಕಾನೂನಿರಂ ಇಲ್ಲದೇ ಇರುವಾಗ ಕೊಡಲಿಕ್ಕೆ ಆಗುವುದಿಲ್ಲ. ನಮ್ಮ ಅಧಿಕಾರಿಗಳಿಗೆ ಹೇಳಿದ್ದೇನೆ. ವಾಣಿಜ್ಯ ಮಂಡಲಿಯವರನ್ನು ಕರೆಸಿ, ಬೇಕಾದರೆ ಕಡಿಮೆ ಬಾಡಿಗೆಯಲ್ಲಿ ಕೊಡುವುದಕ್ಕೆ ಅವಕಾಶ ಮಾಡಿಕೊಡಿ ಎಂದು ಹೇಳೋಣ. ಎರಡನೆಯದಾಗಿ, ಶಾಸಕರು, ಮುಖ್ಯ ಮಂತ್ರಿಗಳು ಎಲ್ಲರೂ ಕೂಡ ಆ ಚಿತ್ರವನ್ನು ನೋಡಲಿಕ್ಕೆ ಏರ್ಪಾಡು ಮಾಡೋಣ. ಕೆಲವು ಚಿತ್ರಗಳು ಸಮಾಜದ ದೃಷ್ಟಿಯಿಂದ ಒಳ್ಳೆಯ ಚಿತ್ರಗಳಾಗಿರುತ್ತವೆ, ಸಮಾಜದ ವಿಭಿನ್ನರುಚಿ ಇರುತ್ತದೆ, ಇವತ್ತಿನ ದಿವಸ ಸಮಾಜದಲ್ಲಿ ಆ ಚಿತ್ರಗಳು ಆಕರ್ಷಕವಾಗಿಲ್ಲ ಎಂದು ಅವರೇ ಹೇಳಿದ್ದಾರೆ; ಅದು ನಿಜ. ಅದು ಕತ್ತಿ ವರಸೆ ಆಗಿರಬಹುದು, ಕಂದಾಚಾರವನ್ನು ತೋರಿಸಿರಬಹುದು, ಜನರಿಗೆ ಹಿಡಿಯದೆ ಇರಬಹುದು. ಆದರೆ ಸರ್ಕಾರಕ್ಕೆ ಅರ್ಜಿ ಸಲ್ಲಿಸಿದರೆ ಸಹಾಯಧನ ಕೊಡುವ ಬಗ್ಗೆ ಯೋಚನೆ ಮಾಡೋಣ. ಮಾನ್ಯ ರಮೇಶ್ ಕುಮಾರ್ ಅವರು ಗುಡ್ ಆಫೀಸರ್ ಎಂದು ಹೇಳಿದರು. ಪುನಃ ವಾಣಿಜ್ಯ ಮಂಡಲಿ ಅಧ್ಯಕ್ಷರನ್ನು ಕರೆಸಿ ಮಾತನಾಡುತ್ತೇನೆ. ಪಾಪ ಅವರು ಕಷ್ಟಪಟ್ಟು ಚಿತ್ರವನ್ನು ತೆಗೆದಿದ್ದಾರೆ. ಸದರಿ ಮೂಲಕ ಕನ್ನಡ ಚಿತ್ರ

ತಯಾರಕರಿಗೆ ನಾನು ಪ್ರಾರ್ಥನೆ ಸಲ್ಲಿಸುವುದೇನೆಂದರೆ, ಸ್ವಲ್ಪ ಜನರಿಗೆ ಮೆಚ್ಚುಗೆಯಾಗುವ ಚಿತ್ರಗಳನ್ನು ತೆಗೆಯಿರಿ ಎಂದು. ಒಂದೂವರೆ, ಎರಡು ವರ್ಷಗಳಿಂದೀಚೆಗೆ ಸ್ವಾಭಾವಿಕವಾಗಿ ಕನ್ನಡ ಚಿತ್ರಗಳ ಗುಣ ಮಟ್ಟ ಕಡಿಮೆಯಾಗುತ್ತಾ ಬರುತ್ತಿದೆ.

ಶ್ರೀ ಜೆ. ಎಚ್. ಪಟೇಲ್.—ಇಡೀ ಭಾರತದಲ್ಲೇ ಸಂತೋಷಪಡುವ ವಿಷಯವೆಂದರೆ, ಕನ್ನಡ ಚಿತ್ರರಂಗದಲ್ಲಿ ಸಂಸ್ಕಾರದಿಂದ ಹಿಡಿದು, ವಂಶವೃಕ್ಷ, ಗೃಹಣ ಮನರಂಜನೆ ದೃಷ್ಟಿಯಿಂದಲೂ ಪ್ರಸಿದ್ಧಿಯಾಗಿವೆ. ನ್ಯೂವೇವ್ ಅಂದರೆ ಹೊಸ ಪ್ರಯೋಗವಾಗಿ ಮಾಡಿರತಕ್ಕ ಚಿತ್ರಗಳು ಇವು, ಸತ್ಯಜಿತ್‌ರೇ ಅವರಿಗೂ ಕೂಡ ಮೆಚ್ಚಿಗೆಯಾಗಿದೆ.

ಶ್ರೀ ಆರ್. ಗುಂಡೂರಾವ್.—ಮೊದಲು ಕನ್ನಡ ಚಿತ್ರಗಳು ಚೆನ್ನಾಗಿ ಬರುತ್ತಾ ಇದ್ದುವು. ಮೊದಲು ಒಳ್ಳೆಯ ಹೆಸರು ಇತ್ತು. ಕೆಲವು ಕನ್ನಡ ಚಿತ್ರಗಳು ಚೆನ್ನಾಗಿ ಓಡಿವೆ. ಕಳೆದ ಒಂದೂವರೆ ವರ್ಷದಿಂದ ಒಳ್ಳೆಯ ಚಿತ್ರಗಳು ಬರುತ್ತಾ ಇಲ್ಲ. ಗುಣಮಟ್ಟದಲ್ಲಿ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಖ್ಯಾತಿಯನ್ನು ಗಳಿಸಬೇಕು. ಗುಣಮಟ್ಟದಲ್ಲಿ ವ್ಯತ್ಯಾಸವಾದರೆ ಪ್ರೊಡ್ಯೂಸ್ ಮಾಡಿದವರು ಮನೆಗೆ ಹೋಗುತ್ತಾರೆ; ಆದೇ ಮೊದಲನೇ ಚಿತ್ರ, ಆದೇ ಕೊನೇ ಚಿತ್ರವೂ ಆಗುತ್ತದೆ. ಒಳ್ಳೆಯ ಡೈರಕ್ಟರ್ ಇರುತ್ತಾರೆ, ಕಥೆ ಸಂಭಾಷಣೆಯನ್ನು ಬರೆದವರು ಇರುತ್ತಾರೆ. ೫೦೦೦, ೧೦.೦೦೦ ರೂಪಾಯಿ ಬಹುಮಾನ, ಮೆಡಲ್ ಬಹುಮಾನ ಬಂದರೆ ತೃಪ್ತಿಯಾಗುವುದಿಲ್ಲ. ಒಬ್ಬ ಸರ್ಕಲ್ ಇನ್ಸ್‌ಪೆಕ್ಟರ್, ನಮಗೆ ಬರೀ ಥ್ಯಾಂಕ್ಸ್ ಹೇಳುತ್ತಾರೆ, ಯಾವ ಜೇಬಿಗೆ ಹಾಕಿಕೊಳ್ಳಲಿ, ಕವರ್ ಕೊಡುವುದಿಲ್ಲ ಎಂದು ಹೇಳಿದರಂತೆ. ಅಂತಹ ಪರಿಸ್ಥಿತಿ ಆಗಬಾರದು. ಅವರು ಬುದ್ಧಿ ಶಕ್ತಿಯನ್ನು ಉಪಯೋಗಮಾಡಿ ತೆಗೆದಿರುತ್ತಾರೆ, ಮಾರ್ಕೆಟ್ ಇಲ್ಲದೇಹೋದರೆ ಪ್ರಯೋಜನ ಪಡೆಯಲಿಕ್ಕೆ ಆಗುವುದಿಲ್ಲ. ಸ್ವಲ್ಪಮಟ್ಟಿಗಾದರೂ ಹಣ ಸಂಪಾದನೆಯಾಗುವ ದೃಷ್ಟಿಯಿಂದಲೂ ಚಿತ್ರವನ್ನು ತೆಗೆಯಬೇಕಾಗುತ್ತದೆ. ಕಾಡು, ಸಂಸ್ಕಾರ ಮುಂತಾದ ಚಿತ್ರಗಳು ಅಂತರರಾಷ್ಟ್ರೀಯ ಮಟ್ಟದಲ್ಲೂ ಬಹುಮಾನ ಪಡೆಯಿತು. ಎರಡನೇ ಚಿತ್ರವೇ ಇಲ್ಲ ಅವರದು; ಪೇಪರಿನಲ್ಲಿ ಬಂತು, ಕಾಡು, ಸಂಸ್ಕಾರ ಚಿತ್ರಗಳನ್ನು ತೆಗೆದರು, ಅವರು ಹೋದರು. ಅಂಥಾ ಒಂದು ಪರಿಸ್ಥಿತಿ ನಮ್ಮ ಭಾಷೆಯ ಚಿತ್ರಗಳಿಗೆ ಬರಬಾರದು. ಕಮರ್ಷಿಯಲ್ ಪಾಯಿಂಟನ್ನೂ ಇಟ್ಟುಕೊಳ್ಳಬೇಕು. ಕಮರ್ಷಿಯಲ್ ಪಾಯಿಂಟ್ ಇಟ್ಟುಕೊಂಡು ತೆಗೆದರೆ ಇನ್ನೂ ಕೆಲವು ಒಳ್ಳೆಯ ಚಿತ್ರಗಳನ್ನು ತೆಗೆಯಲಿಕ್ಕೆ ಅವಕಾಶವಾಗುತ್ತದೆ. ನಮ್ಮ ರಾಜ್ಯದಲ್ಲಿ ಬೇರೆ ಭಾಷೆಯ ಚಿತ್ರಗಳನ್ನು ನೋಡಿ. ತಮಿಳು ಚಿತ್ರಗಳು ಮೊದಲು ಹಿಂದೆ ಹಿಂದೆ ಹೋಗಿತ್ತು. ಈಗ ಯಾವ ಮಟ್ಟದಲ್ಲಿವೆ. ಹಿಂದಿ ಚಿತ್ರಗಳಂತೂ ಚೆನ್ನಾಗಿ ಓಡುತ್ತಿವೆ. ಗೃಹಣ ಚಿತ್ರದ ಬಗ್ಗೆ ವಿಶೇಷ ಸಹಾನುಭೂತಿ ಇದೆ. ವಾಣಿಜ್ಯ ಮಂಡಲಿ ಅಧ್ಯಕ್ಷರನ್ನು ಕರೆಸಿ ಮಾತನಾಡಿ ಉಪಕಾರ ಮಾಡಲಿಕ್ಕೆ ಪ್ರಯತ್ನ ಪಡೋಣ. ಮನವಿ ಬಂದ ತಕ್ಷಣ, ಸಬ್ಸಿಡಿ ಎಷ್ಟು ಕೊಡಬೇಕೋ ಅದನ್ನು ಕೊಡಲಿಕ್ಕೆ ಅವಕಾಶವಾಗುತ್ತದೆ.

ಶ್ರೀ ಐ. ಪಿ. ಡಿ. ಸಾಲಪ್ಪ.—ಟ್ಯಾಕ್ಸ್ ಎಗ್ಸಂಪ್ಷನ್ ಮಾಡಿಕೊಟ್ಟರೆ ಅನುಕೂಲವಾಗುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಕನ್ನಡ ಚಿತ್ರಗಳಲ್ಲಿ ಇತ್ತೀಚೆಗೆ ಗುಣಮಟ್ಟ ಕಡಿಮೆಯಾಗಿದೆ ಎಂದು ಹೇಳಿದಿರಿ. ಸಬ್ಸಿಡಿ ಒಂದು ಲಕ್ಷ ಕೊಡುತ್ತೀರಿ. ಕೆಲವರು ಸಬ್ಸಿಡಿಗಾಗಿ ಚಿತ್ರ ತೆಗೆಯತಕ್ಕ ಪರಿಸ್ಥಿತಿ ಇದೆ. ಗುಜರಾತ್, ಮಹಾರಾಷ್ಟ್ರದಲ್ಲಿ ಟ್ಯಾಕ್ಸ್ ಫ್ರೀ ಮಾಡುತ್ತಾರೆ, ಸಬ್ಸಿಡಿ ಕೊಡುವುದಿಲ್ಲ.

ಟ್ಯಾಕ್ಸ್ ಫ್ರೀ ಮಾಡುವುದರಿಂದ ಅಂಥ ಚಿತ್ರಗಳನ್ನು ಜನ ಬಂದು ನೋಡಿದಾಗ ಅವರಿಗೆ ಲಾಭ ಸಿಗುತ್ತದೆ. ಇಲ್ಲದೇ ಹೋದರೆ ಇಲ್ಲ. ಆದರೆ ನೀವು ಪ್ರತಿಯೊಂದು ಚಿತ್ರಕ್ಕೂ ಸಬ್ಸಿಡಿ ಕೊಡುತ್ತಿರುವುದರಿಂದ ಎಲ್ಲರೂ ಚಿತ್ರ ತೆಗೆಯತಕ್ಕ ಹವ್ಯಾಸಕ್ಕೆ ಇಳಿದು ಇವತ್ತು ಚಿತ್ರಗಳ ಗುಣಮಟ್ಟ ಇಳಿಯುವುದಕ್ಕೆ ಕಾರಣವಾಗಿದೆ. ಆದಕ್ಕೆ ನನ್ನ ಸಲಹೆಯನ್ನು ಕನ್‌ಸಿಡರ್ ಮಾಡುವುದಕ್ಕೆ ಆಲೋಚನೆ ಮಾಡಿ ನೋಡಿ. ಸಬ್ಸಿಡಿ ಕೊಡುವುದರ ಬದಲು ಒಳ್ಳೆಯ ಚಿತ್ರಗಳಿಗೆ ಟ್ಯಾಕ್ಸ್ ಫ್ರೀ ಮಾಡುವುದು ಒಳ್ಳೆಯದು.